# ಶ್ರೀ ಏರೀ ಸುಬ್ಬಣ್ಣಾಚಾರ್ಯ (1921 – 2018)

ಶ್ರೀಯುತರು 1970 ಯಿಂದ 2006 ರ ವರೆಗೆ (36 ವರ್ಷ ಸುದೀರ್ಘ ಕಾಲ) ಮದ್ರಾಸಿನ ವೆಸ್ಟ್ ಮಾಂಬಳಂನಲ್ಲಿನ ಮಾಧ್ವ ಸಮಾಜದಲ್ಲಿ ಸರ್ವಮೂಲ ಗ್ರಂಥಗಳ ಪಾಠವನ್ನು ಹೇಳುತ್ತಿದ್ದರು.

ಶ್ರೀ ಬಿದರಹಳ್ಳಿ ಶ್ರೀನಿವಾಸತೀರ್ಥರ **ನಾರಾಯಣ ಶಬ್ದಾರ್ಥ**ವನ್ನು ಕನ್ನಡಕ್ಕೆ ಅನುವಾದ ಮಾಡಿ ಟಿಟಿಡಿ, ತಿರುಪತಿ ಯ ಸಹಾಯದಿಂದ ಪ್ರಕಟಿಸಿದರು.

ಹಾಗೆಯೇ ಶ್ರೀ ರಾಘವೇಂದ್ರ ಸ್ವಾಮಿಗಳ **ಮಹಾಭಾರತ ತಾತ್ಪರ್ಯ ನಿರ್ಣಯದ ಭಾವ ಸಂಗ್ರಹ**ವನ್ನೂ ಕನ್ನಡಕ್ಕೆ ಅನುವಾದ ಮಾಡಿ ಪ್ರಕಟಿಸಿದರು.

ವಾಯುಪುರಾಣಾಂತರ್ಗತ **ಮಾಘಮಾಸ ಮಹಾತ್ಮೆ** ಯನ್ನು ಕನ್ನಡದಲ್ಲಿ ಬರೆದು ಟಿಟಿಡಿ, ತಿರುಪತಿ ಯ ಸಹಾಯದಿಂದ ಪ್ರಕಟಿಸಿದರು.

ಶ್ರೀಯುತರು **ಸುಮಧ್ವ ವಿಜಯ, ಸಭಾಸಾರ ಸಂಗ್ರಹ ಮತ್ತು ಪ್ರಾತಃ ಸಂಕಲ್ಪ ಗದ್ಯ** ಗ್ರಂಥಗಳನ್ನು ವಿಸ್ತಾರವಾಗಿ ಪಾಠಮಾಡಿದಾಗ ಶ್ರೀ ವಿ ಎಸ್. ಶೇಷಗಿರಿರಾಯರು (ತಮಿಳು ಪಂಡಿತರು, ನಿವೃತ್ತ ಹೈಸ್ಕೂಲ್ ಹೆಡ್ ಮಾಸ್ಟರ್) ತಮಿಳಿನಲ್ಲಿ ಅರ್ಥ ಬರೆದುಕೊಂಡು, ಅದ್ದನ್ನು ತಮಿಳಿನಲ್ಲಿ ಪುಸ್ತಕರೂಪದಲ್ಲಿ ಬರೆದದ್ದನ್ನು ವಿಶ್ವ ಮಧ್ವ ಪರಿಷತ್ ಪ್ರಕಟಿಸಿತು.

ಶ್ರೀಯುತರು ಶ್ರೀ ಏರಿ ರಾಮಾಚಾರ್ಯರ ಸುಪುತ್ರರು. ಏರೀ ರಾಮಾಚಾರ್ಯರೂ ಒಬ್ಬ ಪಂಡಿತರೇ ಆಗಿದ್ದರು.

ಶ್ರೀಯುತರು **ಚಿಂತಾಮಣಿಯ ಏರೀ ಶೇಷಾಚಾರ್ಯರ** ವಂಶದಲ್ಲಿ ಏಳನೇ ತಲೆಮಾರಿನವರು. ದಾವಣಗೆರೆಯಲ್ಲಿ ಕೆಲಸ ಮಾಡುತ್ತಿದ್ದ ಒಂದು ಸಣ್ಣ ಅವಧಿಯಲ್ಲಿ **ಬೆಳಗಾಂ ಭೀಮರಾವ್** ರಿಂದ ಪ್ರಭಾವಿತರಾಗಿ ಅವರನ್ನೇ ಏಕಲವ್ಯೋಪಾದಿಯಲ್ಲಿ ಗುರುಗಳೆಂದು ಸ್ವೀಕರಿಸಿದ್ದರು.

ಶ್ರೀಯುತರು 1921 ನಲ್ಲಿ ಹುಟ್ಟಿದವರಾಗಿದ್ದು, ಶ್ರೀ ಸತ್ಯಧ್ಯಾನತೀರ್ಥರಿಂದ ಮುದ್ರೆ ಪಡೆದಿದ್ದರು. ಶ್ರೀ ಸತ್ಯಪ್ರಮೋದ ತೀರ್ಥರಿಗೆ ಹಾಗೂ ಶ್ರೀ ಸತ್ಯಾತ್ಮ ತೀರ್ಥರಿಗೆ ಪ್ರೀತಿಪಾತ್ರರಾಗಿದ್ದರು.

1940 ರಿಂದ **ಅಂಚೆ ಇಲಾಖೆ**ಯ ಕನಾಟಕದ ಬಹುಭಾಗದಲ್ಲಿ ಸೇವೆ ಸಲ್ಲಿಸಿ 1970 ರಲ್ಲಿ ಮದ್ರಾಸಿಗೆ **ಗೆಝೆಟೆಡ್ ಪೋಸ್ಟ್ ಮಾಸ್ಟರ್** ಆಗಿ ಬಂದು 1979 ರಲ್ಲಿ ನಿವೃತ್ತರಾದರು.

ವಿಲಂಬಿ ಸಂವತ್ಸರದ ಶ್ರಾವಣ ಶುದ್ಧ ತ್ರಯೋದಶೀಯಂದು ಬೆಂಗಳೂರಿನಲ್ಲಿ ಸ್ವರ್ಗಸ್ಥರಾದರು.